


# ಗಿನ್ನೆಸ್ ದಾಖಲೆಯ ರಸ್ತೆ!

ನ್ಯೂಜಿಲೆಂಡಿನ ದಕ್ಷಿಣಕ್ಕಿರುವ ಡ್ಯುನೆಡಿನ್ ನಗರದಲ್ಲಿರುವ ಬಾಲ್ಡ್‌ವಿನ್ ರಸ್ತೆಯು ಇಡೀ ಪ್ರಪಂಚದಲ್ಲೇ ಅತ್ಯಂತ ಕಡಿದಾದ ರಸ್ತೆ ಎಂಬ ಗಿನ್ನೆಸ್ ದಾಖಲೆಯ ಹೆಗ್ಗಳಿಕೆಯನ್ನು ಹೊಂದಿದೆ.

ಸಾಧಾರಣವಾದ ಇಳಿಜಾರಿನಿಂದ ಪ್ರಾರಂಭ ಗೊಳ್ಳುವ ಸುಮಾರು 350 ಮೀಟರ್‌ನಷ್ಟು ಉದ್ದದ ಈ ರಸ್ತೆಯು ಮೇಲೇರುತ್ತಾ ಹೋದಂತೆ ಹೆಚ್ಚಾಗುತ್ತಾ ಗರಿಷ್ಠ 19 ಡಿಗ್ರಿಯಷ್ಟು ಇಳಿಜಾರನ್ನು ಹೊಂದಿದೆ. ಸಮತಟ್ಟದಲ್ಲಿ ಪ್ರಯಾಣಿಸುವಾಗ ಈ ರಸ್ತೆಯು, ಪ್ರತೀ 2.86 ಮೀಟರ್ ಗೆ ಒಂದು ಮೀಟರ್ ನಷ್ಟು ಇಳಿಜಾರು ಏರಿಕೆಯಾಗುತ್ತಾ ಹೋಗುತ್ತದೆ. ಇದು ಎಷ್ಟು ಇಳಿಜಾರು ಇದೆಯೆಂದರೆ ಈ ರಸ್ತೆಯ ಮೇಲ್ಮೈಗೆ ಡಾಂಬರ್ ಬದಲಾಗಿ ಕಾಂಕ್ರೀಟನ್ನು ಹಾಕಲಾಗಿದೆ! ಇಲ್ಲದಿದ್ದರೆ ಬೇಸಿಗೆ ಕಾಲದಲ್ಲಿ ಡಾಂಬರು ಕರಗಿ ಕೆಳಗೆ ಹರಿದು ಹೋಗುತ್ತದೆ!

ಜನವಸತಿಯುಳ್ಳ ಬಾಲ್ಡ್‌ವಿನ್ ರಸ್ತೆ, ಈಶಾನ್ಯ ಕಣಿವೆಯ ಉಪನಗರದಲ್ಲಿ ಇದೆ. ಈ ರಸ್ತೆ ನಿರ್ಮಾಣಕ್ಕೆ ಮುಖ್ಯ ಕಾರಣ, ನಗರ ಯೋಜನೆ (ಪ್ಲಾನಿಂಗ್)ಯನ್ನು ಸರಿಯಾಗಿ ಮಾಡದಿರುವುದು. ಈ ರಸ್ತೆಗೆ ಸಮಾನಾಂತರವಾಗಿರುವ ಅರ್ನಾಲ್ಡ್ ಸ್ಟ್ರೀಟ್, ಡಾಲ್ಮೆನಿ ಸ್ಟ್ರೀಟ್ ಮತ್ತು ಕಾಲ್ಡರ್ ಅವೆನ್ಯೂ ರಸ್ತೆಗಳೂ ಸಹ ಇಳಿಜಾರಾಗಿವೆ. ಆದರೆ ಬಾಲ್ಡ್‌ವಿನ್ ಸ್ಟ್ರೀಟ್ ಮಾತ್ರ ಇವೆಲ್ಲಕ್ಕಿಂತ ಹೆಚ್ಚು ಕಡಿದಾಗಿದೆ.

ಇಂದು ಡ್ಯುನೆಡಿನ್ ಪಟ್ಟಣವಾಸಿಗಳು ಬಾಲ್ಡ್‌ವಿನ್ ಸ್ಟ್ರೀಟ್ ಪ್ರಖ್ಯಾತಿಯ ಬಗ್ಗೆ ಅತೀವ ಹೆಮ್ಮೆಪಡುತ್ತಾರೆ. ನಗರಕ್ಕೆ ಬಂದು ನಡೆಯುತ್ತಾ ಮೇಲೇರಿ, ನಡು ರಸ್ತೆಯಲ್ಲಿ ನಿಂತು ನೋಡಿದಾಗ ಕಾಣ ಬರುವ ಸುತ್ತಲಿನ ದೃಶ್ಯವಂತೂ ಮನಮೋಹಕ. ಪ್ರತೀ ವರ್ಷ ಬೇಸಿಗೆಯಲ್ಲಿ ನಡೆಸುವ ಬಾಲ್ಡ್‌ವಿನ್ ಸ್ಟ್ರೀಟ್ ಗಟ್ಟಸ್ಟರ್ ಉತ್ಸವದಲ್ಲಿ ಅನೇಕ ಸ್ಪರ್ಧೆಗಳನ್ನು ಆಯೋಜಿಸಲಾಗುತ್ತದೆ.

ಕಡಿಮೆ ಸಮಯದಲ್ಲಿ ಓಡುತ್ತಾ ಈ ರಸ್ತೆಯ ಮೇಲೇರುವುದು ಹಾಗೂ ಕೆಳಕ್ಕಿಳಿಯುವ ಸ್ಪರ್ಧೆಯಲ್ಲಿ ಅಥ್ಲೀಟ್‌ಗಳ ಫಿಟ್‌ನೆಸ್ ಹಾಗೂ ಬ್ಯಾಲೆನ್ಸಿಂಗ್ ಅನ್ನು ಟೆಸ್ಟ್ ಮಾಡಲಾಗುತ್ತದೆ. ಟೆನ್ನಿಸ್ ಬಾಲ್ ಗಳನ್ನು, ಚಾಕೊಲೇಟ್ ಲೇಪಿತ ಮಿಠಾಯಿಗಳನ್ನು ಕೆಳಕ್ಕೆ ಜಾರಿಸುವುದು, ಅವುಗಳನ್ನು ಹಿಡಿಯುವುದು ಮುಂತಾದ ಆಟಗಳನ್ನು ಈ ರಸ್ತೆಯಲ್ಲಿ ಆಯೋಜಿಸಲಾಗುತ್ತದೆ. ಇಲ್ಲಿ ನಡೆಯುವ ಸ್ಪರ್ಧೆಗಳಲ್ಲಿ ಭಾಗವಹಿಸಲು ದೇಶ ವಿದೇಶಗಳಿಂದ ಸ್ಪರ್ಧಾಳುಗಳು ಪ್ರವಾಹೋಪಾದಿಯಲ್ಲಿ ಆಗಮಿಸುತ್ತಾರೆ.

■ ವಿದ್ಯಾ ವಿ. ಹಾಲಭಾವಿ